CC No. 572/2021
PW 01 (ಸಿದ್ದೇಶ)

ದಿನಾಂಕಃ 04.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ – ಶ್ರೀ LSB ವಕೀಲರಿಂದ.

ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಮ್ಮ ಮನೆತನದ ಹೆಸರು ತರಲೆ ಎಂದರೆ ಹೌದು. ನಮ್ಮ ತಂದೆಯ ಹೆಸರು ತರಲೆ ಕೊಟ್ರಪ್ಪ ಎಂದರೆ ಹೌದು. ನಾವು ಹಲವಾರು ಪ್ರಕರಣಕ್ಕೆ ನ್ಯಾಯಾಲಯಕ್ಕೆ ಬಂದು ಹೋಗುತ್ತೇವೆ ಎಂದರೆ ನಮ್ಮ ಪ್ರಕರಣಕ್ಕೆ ನಾವು ಬಂದು ಹೋಗುತ್ತೇವೆ.

ಪ್ರಕಾಶ ಕೊಟ್ಟುರು ಅವರು ನಮ್ಮ ಬಿದ್ದಿರುವ ಕೋಣೆಯಲ್ಲಿ ಬಾಳೆ ಹಣ್ಣಿನ ವ್ಯಾಪಾರ ಮಾಡುತ್ತಾರೆ ಎಂದರೆ ಇಲ್ಲ. ಅವರು ಹಾಗೂ ನಾನು ಆತ್ಮೀಯರು ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಅವರು ಒಟ್ಟಾಗಿ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ನಾನು ನನ್ನ ಪ್ರಕರಣಕ್ಕೆ ಬಂದಿರುತ್ತೇನೆ. ಆರೋಪಿ ನನಗೆ ಬಹಳ ವರ್ಷಗಳಿಂದ ಪರಿಚಯ. ಆತನಿಗೆ 90 ವರ್ಷ ವಯಸ್ಸಾಗಿದೆ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ನಡೆದಿದೆ. ಆ ಬಗ್ಗೆ ನನ್ನ ಬಳಿ ದಾಖಲೆ ಪತ್ರಗಳು ಇವೆ. ನನಗೂ ಅವರಿಗೂ 10 ವರ್ಷಗಳ ಹಿಂದೆ ವ್ಯವಹಾರ ನಡೆದಿರುತ್ತದೆ. ನಮಗೂ ಅವರಿಗೂ ಹಣದ ವ್ಯವಹಾರ ನಡೆದಿರುತ್ತದೆ ಹಾಗೂ ನಾನು ಅವರ ದಲ್ಲಾಳಿ ಅಂಗಡಿಗೆ ಬೆಳೆದ ವಸ್ತುಗಳನ್ನು ಹಾಕಿರುತ್ತೇನೆ. ನಮ್ಮ ಮಧ್ಯ ನಡೆದ ವ್ಯವಹಾರಗಳ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಬಲ್ಲೇ. 10 ವರ್ಷಗಳ ಹಿಂದೆಯೇ ಆರೋಪಿ ದಲ್ಲಾಳಿ ವ್ಯಾಪಾರ ಮುಕ್ತಾಯ ಮಾಡಿದ್ದಾರೆ ಎಂದರೆ ಇರಬಹುದು.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.